ಸಿಸಿ. ನಂಬರಃ 557/2023
ಪಿ. ಡಬ್ಲ್ಯೂಃ 1

ದಿಃ 13-09-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

ಇಂದು ನಿಮ್ಮ ಜೊತೆಗೆ ಚಾಸಾ-5 ರವರು ಬಂದಿರುತ್ತಾರೆ ಎಂದರೆ ಸರಿ. ನೀವು ಬಾವಿಕೇರಿಗೆ ಹೋಗಿರುತ್ತೀರಿ ಎಂದು ಹೇಳಿದಾಗ ಸುಮಾರು ಎಷ್ಟು ಜನರು ಸೇರಿದ್ದರು ಎಂದರೆ ಸಾಕ್ಷಿಯು ಗೆಸ್ ಮಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಯಾವ ಪೊಲೀಸರು ಠಾಣೆಗೆ ಬರಲು ಕರೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ನಿಮಗೆ ಹೇಳಿದ್ದು ಎಷ್ಟು ಗಂಟೆಗೆ ಎಂದರೆ ಸಾಕ್ಷಿಯು ದಿಃ13-04-2023 ರಂದು ಬೆಳಿಗ್ಗೆ 10.45 ರಿಂದ 11.45 ರ ಅವಧಿಯಲ್ಲಿ ಇರಬಹುದು ಎಂದು ನುಡಿಯುತ್ತಾರೆ.

2. ಪಂಚನಾಮೆಯಲ್ಲಿ ಏನು ಬರೆದಿರುತ್ತರೆ ಎಂದು ನಿಖರವಾಗಿ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ನಾನು ಪಂಚನಾಮೆಯನ್ನು ಓದಿದ್ದು ಇರುವುದಿಲ್ಲ, ಸಾಕ್ಷಿಯು ಮುಂದುವರೆದು ಸಹಿ ಹಾಕಬೇಕಾದರೆ ಓದಿರುತ್ತೇನೆ, ಈಗ ನೆನಪಿರುವುದಿಲ್ಲ ಎಂದು

ನುಡಿಯುತ್ತಾರೆ. ವಾಹನ ಸಂಖ್ಯೆಯನ್ನು ಆ ದಿನ ನೀವು ಏನಾದರೂ ಬರೆದಿಟುಟಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಬರೆದಿಟ್ಟುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಬರೆದ ಗುನ್ನಾ ಸಂಖ್ಯೆ ಹೇಳಲು ಬರುತ್ತದೆಯಾ ಎಂದರೆ ನೆನಪಿರುವುದಿಲ್ಲ. ಪ್ರಶಾಂತನ ಇವರು ವಯಸ್ಸು ಎಷ್ಟು ಬರೆದಿರುತ್ತಾರೆ ಎಂದು ಹೇಳಲು ಬರುತ್ತದೆಯಾ ಎಂದರೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನೆನಪು ಮಾಡಿಕೊಂಡು ಈ ಪ್ರಕರಣದಲ್ಲಿ ಯಾವ ಕಲಂ ಅಡಿಯಲ್ಲಿ ಹಾಕಿರುತ್ತಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೆನಪು ಮಾಡಿಕೊಂಡು ರವಿ ಇವರ ವಯಸ್ಸು ಬರೆದಿರುವ ಬಗ್ಗೆ ನೆನಪಿರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಆಟೋ ರಿಕ್ಷಾದ ಎತ್ತರ ಹಾಗೂ ಅಗಲ ಎಷ್ಟು ಇತ್ತು ಎಂದು ಏನಾದರೂ ನಮೂದು ಮಾಡಿರುತ್ತಾರಾ ಎಂದರೆ ಸಾಕ್ಷಿಯು ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ಆಟೊ ರಿಕ್ಷಾದ ನಂಬರ ಪ್ಲೇಟನ್ನು ಎಲ್ಲಿ ಹಾಕಿರುತ್ತಾರೆ ಎಂದು ನೋಡಿರುತ್ತೀರಾ ಎಂದರೆ ಸಾಕ್ಷಿಯು ಮುಂದುಗಡೆ ಕೆಳಗಡೆ ಮಧ್ಯದಲ್ಲಿ ಇತ್ತು ಎಂದು ನುಡಿಯುತ್ತಾರೆ. ಹೆಡ್ ಲೈಟ್ ನ ಮೇಲೆ ಅಥವಾ ಕೆಳಗೆ ಇತ್ತಾ ಎಂದರೆ ಸಾಕ್ಷಿಯು ಹೆಡ್ ಲೈಟ್ ಸೈಡಿಗೆ ಇರುತ್ತಿದ್ದು, ಅದರ ಮಧ್ಯ ನಂಬರ್ ಪ್ಲೇಟ್ ಇರುತ್ತದೆ ಎಂದು ನುಡಿಯುತ್ತಾರೆ. ನಂಬರ್ ಪ್ಲೇಟ್ ಹೆಡ್ ಲೈಟ್ ನ ಸಮನಾಗಿ ಇತ್ತಾ ಅಥವಾ ಮೇಲೆ ಅಥವಾ ಕೆಳಗೆ ಇತ್ತಾ ಎಂದರೆ ಸಾಕ್ಷಿಯು ಒಂದು ವರ್ಷವಾಗಿದ್ದರಿಂದ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆಟೋ ರಿಕ್ಷಾಗೆ ಎಲ್ಲಿ ಹಾನಿಯಾಗಿತ್ತು ಎಂದು

ಹೇಳಲು ಬರುತ್ತದೆಯಾ ಎಂದರೆ  ಸಾಕ್ಷಿಯು ಬಲಗಡೆ ನಂಬರ್ ಪ್ಲೇಟ್ ಮತ್ತು ಮಿರರ್ ಡ್ಯಾಮೇಜ್ ಆಗಿತ್ತು ಮತ್ತು ನಂಬರ್ ಪ್ಲೇಟ್ ನ ಬಲಬದಿಗೆ ಸ್ವಲ್ಪ ಬೆಂಡಾಗಿತ್ತು ಎಂದು ನುಡಿಯುತ್ತಾರೆ. ಕನ್ನಡಿಯು ನೆಲದಿಂದ  ಎಷ್ಟು ಎತ್ತರ ಇತ್ತು ಎಂದರೆ ಸಾಕ್ಷಿಯು ನೆಲದಿಂದ ಅಂದಾಜು  ಮೂರುವರೆ – ನಾಲ್ಕು ಅಡಿ ಎತ್ತರದಲ್ಲಿ ಇತ್ತು ಎಂದು ನುಡಿಯುತ್ತಾರೆ. ನೀವು ಬಾವಿಕೇರಿಗೆ ಹೋಗಿದ್ದಾಗಲಿ ಅಥವಾ  ಪೊಲೀಸರು ನಿಮ್ಮನ್ನು ಕರೆದಿದ್ದಾಗಲಿ ಇರುವುದಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ನೀವು ಪೊಲೀಸ್ ಠಾಣೆಯ ಹತ್ತಿರ ಹೋಗಿದ್ದಾಗಲಿ ಅಥವಾ ಯಾವುದೇ ಪಂಚನಾಮೆಯನ್ನು ಮಾಡಿದ್ದಾಗಲಿ ಇರುವುದಿಲ್ಲ, ಪೊಟೋಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3. ಸಾಮಾನ್ಯವಾಗಿ ಸಹಿ ಮಾಡಬೇಕಾದರ ಪ್ರತಿ  ಪುಟಕ್ಕೆ ಸಹಿ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಒಂದೇ ಕಡೆ ಮಾಡಿ ಎಂದು ಹೇಳಿದ್ದರಿಂದ ಒಂದೇ ಕಡೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.  ನೀವು ಆ ದಿನ ಪೊಲೀಸ್ ಠಾಣೆಗೆ ಹೋಗಿದ್ದೇ ಇರುವುದಿಲ್ಲ ಹಾಗೂ ಅಲ್ಲಿ  1ನೇ ಆರೋಪಿಯು  ಇದ್ದಿದ್ದೆ ಇರುವುದಿಲ್ಲ, ನೀವು ಈ ಪ್ರಕರಣಕ್ಕೆ ಪೂರಕವಾಗುಂತೆ  ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಿಕ್ಷಾದ ಶೇಪ್ ಗೆ ಏನಾದರೂ ಹಾನಿಯಾಗಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.